ಮಾಡಬೇಕಾಗುತ್ತದೆ, ಚುನಾವಣೆಯನ್ನು ಮುಂದಕ್ಕೆ ಹಾಕುವುದಕ್ಕೆ ನಾವು ಬರುವುದಿಲ್ಲ. ಅದರ ಬಗ್ಗೆ ನನಗೆ ಭರವಸೆ ಬೇಕು.

ಉಪಾಧ್ಯಕ್ಷರು : ಕಾನೂನು ಪ್ರಕಾರ ಮಾಡುತ್ತೇವೆಂದು ಹೇಳಿದ್ದಾರಲ್ಲಾ.....

ಡಾ|| ಹೆಚ್.ಡಿ. ಲಮಾಣಿ : 14ನೇ ತಾರೀಖು ನಾವು ಆ ಚುನಾವಣೆಯನ್ನು ಮಾಡುತ್ತಿದ್ದೇವೆಂದು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ನನ್ನ ಗಮನಸೆಳೆಯುವ ಸೂಚನೆಗೆ ಮಾನ್ಯ ಮುಖ್ಯಮಂತ್ರಿಗಳು ಇರಬೇಕಾಗಿತ್ತು. ತಾವು ಏನು ಹೇಳುತ್ತಿರೋ ಅದನ್ನು ನೋಡಿಕೊಂಡು ಮುಂದೆ ನಾನು ಮಾತನಾಡುತ್ತೇನೆ.

(2) **ಇತ್ತೀಚೆಗೆ ಬೆಂಗಳೂರಿನ ಸದಾಶಿವನಗರದಲ್ಲಿ ಕನ್ನಡಿಗರ ಭಾವನೆಗಳಿಗೆ ವಿರುದ್ಧವಾಗಿ ಸ್ಥಾಪಿಸಿರುವ ಶಿವಾಜಿ ಪ್ರತಿಮೆಯನ್ನು ತೆಗೆಸುವ ಬಗ್ಗೆ.**

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೆ ಇತ್ತೀಚೆಗೆ ಬೆಂಗಳೂರಿನ ಸದಾಶಿವನಗರದಲ್ಲಿ ಕನ್ನಡಿಗರ ಭಾವನೆಗಳಿಗೆ ವಿರುದ್ಧವಾಗಿ ಸ್ಥಾಪಿಸಿರುವ ಶಿವಾಜಿ ಪ್ರತಿಮೆಯನ್ನು ತೆಗೆಸುವ ಬಗ್ಗೆ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಮಾಡುತ್ತೇನೆ.

ಮರಾಠಾ ವೆಲ್‌ಫೇರ್ ಅಸೋಸಿಯೇಷನ್ ಕಾರ್ಯದರ್ಶಿಯವರು ದಿನಾಂಕ 21-12-83ರಂದು ಅಂದಿನ ನಗರಾಭಿವೃದ್ಧಿ ಸಚಿವರಿಗೆ ಯುವಜನ ಸೇವಾ ಸಚಿವರ ಮೂಲಕ ಸದಾಶಿವನಗರದ ಸ್ಯಾಂಕಿ ರಸ್ತೆಯಲ್ಲಿರುವ ಈಜುಕೊಳದ ಪೂರ್ವಭಾಗದಲ್ಲಿಯ ಜಾಗದಲ್ಲಿ ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆ ಸ್ಥಾಪಿಸಲು ಅನುಮತಿ ನೀಡುವಂತೆ ಮನವಿಸಲ್ಲಿಸಿರುತ್ತಾರೆ. ಈ ಮನವಿಯನ್ನು ಪರಿಗಣಿಸಲು ಬೆಂಗಳೂರು ಮಹಾನಗರ ಪಾಲಿಕೆಗೆ ಕಳುಹಿಸಲಾಗಿತ್ತು.ಮಹಾನಗರ ಪಾಲಿಕೆಯ ಸಭೆ ನಡವಳಿಕೆ ವಿಷಯ ಸಂಖ್ಯೆ 206 (503) ರಲ್ಲಿ ದಿನಾಂಕ 26-6-85ರಂದು ಸದಾಶಿವನಗರದ ಈಜುಕೊಳದ ಪೂರ್ವಭಾಗದಲ್ಲಿರುವ ಉದ್ಯಾನವನದ ಪೂರ್ವಕ್ಕೆ ಮರಾಠಾ ಕ್ಷೇಮಾಭಿವೃದ್ಧಿ ಸಂಘದವರು ಶ್ರೀ ಛತ್ರಪತಿ ಶಿವಾಜಿ ಪ್ರತಿಮೆ ಸ್ಥಾಪಿಸಲು ತೀರ್ಮಾನಿಸಿತ್ತು. ಈ ತಿರ್ಮಾನದಂತೆ ಸಂಬಂಧಪಟ್ಟ ಸಂಘದವರಿಗೆ ಜಾಗವನ್ನು ದಿನಾಂಕ 5-3-87 ರಂದು ಆಗಿನ ಆಯುಕ್ತರು ಸಂಖ್ಯೆ. 49:86-87 ರಲ್ಲಿ ಒಂದಪ ಹಿಂಬರಹ ನೀಡಿ ಸದರಿ ಪ್ರತಿಮೆ ಸ್ಥಾಪಿಸಲು ಅನುಮತಿ ನೀಡಿರುತ್ತಾರೆ. ಇದಾದ ನಂತರ ಬೆಂಗಳೂರು ಕಲಾ ಆಯೋಗದ ಅಧ್ಯಕ್ಷರು ಸಹ ಈ ಪ್ರತಿಮೆಯನ್ನು ಸ್ಥಾಪಿಸಲು ಅನುಮತಿ ನೀಡಿರುತ್ತಾರೆ. ಎಂದು ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ದಿನಾಂಕ 20-1-1994ರ ವರದಿಯಲ್ಲಿ ತಿಳಿಸಿರುತ್ತಾರೆ.

ಬೆಂಗಳೂರು ಮಹಾನಗರ ಪಾಲಿಕೆಯ ಕಟ್ಟಡದ ಉಪವಿಧಿಗಳು 1983ರ ನಿಯಮ 5ರನ್ವಯ ಯಾವುದೇ ಪ್ರತಿಮೆ ಸ್ಥಾಪಿಸಲು ಅನುಮತಿ ನೀಡುವ ಅಧಿಕಾರವನ್ನು ಬೆಂಗಳೂರು ಮಹಾನಗರ ಪಾಲಿಕೆಯೇ ಹೊಂದಿರುತ್ತದೆ. ಈ ಬಗ್ಗೆ ಸರ್ಕಾರದ ಆದೇಶ ಹೊರಡಿಸುವ ಅಗತ್ಯವಿರುವುದಿಲ್ಲ. ಆದುದರಿಂದ ಸರ್ಕಾರ ಯಾವುದೇ ಆದೇಶ ಹೊರಡಿಸಿರುವುದಿಲ್ಲ. ಆದರೆ ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಇಲಾಖೆಯ ಆದೇಶ ಸಂಖ್ಯೆ ಐಟಿವೈ 41 ಕೆಆರ್‌ಎ 86 ದಿನಾಂಕ 25-3-86 ಮತ್ತು ಐಟಿವೈ 200 ಕೆಆರ್‌ಎ. 86 ದಿನಾಂಕ 20-11-86ಗಳಲ್ಲಿ ಒಟ್ಟು ರೂ. 3.00 ಲಕ್ಷಗಳನ್ನು ಶ್ರೀ ಛತ್ರಪತಿ ಶಿವಾಜಿ ಪ್ರತಿಮೆಯನ್ನು ಸ್ಥಾಪಿಸಲು ಮಂಜೂರು ಮಾಡಿದೆ.

ಮೇಲ್ಕಂಡ ಕಾರಣಗಳಿಂದ ಮರಾಠಾ ವೆಲ್‌ಫೇರ್ ಅಸೋಸಿಯೇಷನ್‌ರವರು ಛತ್ರಪತಿ ಶಿವಾಜಿ ಪ್ರತಿಮೆಯನ್ನು ಕಾನೂನು ಬಾಹಿರವಾಗಿ ಸ್ಥಾಪಿಸಿರುವುದಿಲ್ಲ. ಶಿವಾಜಿ ಮಹಾರಾಜರು ರಾಷ್ಟ್ರದ ಏಳಿಗೆಗಾಗಿ ಶ್ರಮಿಸಿರುವವರಲ್ಲಿ ಪ್ರಮುಖ್ಯರಾಗಿರುವುದರಿಂದ ಅವರ ಪ್ರತಿಮೆ ಸ್ಥಾಪಿಸಿರುವುದು ಕನ್ನಡಗರ ಭಾವನೆಯನ್ನು ಕೆರಳಿಸಿರುವುದಿಲ್ಲ. ಶಿವಾಜಿ ಮಹಾರಾಜರ ಹೆಸರಿನಲ್ಲಿ ನಗರದಲ್ಲಿ ಒಂದು ಭಾಗವೇ ಇರುವುದರಿಂದ, ಅವರ ಪ್ರತಿಮೆ ಸ್ಥಾಪಿಸುವುದು ಕನ್ನಡಿಗರ ಭಾವನೆಗಳಿಗೆ ತದ್ವಿರುದ್ಧವಲ್ಲವೆಂದು ತಿಳಿಯಲಾಗಿದೆ. ಈ ಮೇಲಿನ ಕಾರಣಗಳಿಂದ ಶಿವಾಜಿ ಪ್ರತಿಮೆಯನ್ನು ತೆಗೆಸುವ ಪ್ರಮೇಯ ಉದ್ಭವಿಸುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ಕನ್ನಡಿಗರ ಭಾವನೆಗಳನ್ನು ಕೆರಳಿಸುವುದಿಲ್ಲ ಎನ್ನುವ ಮಾತನ್ನು ಇವರು ಹೇಳಿದ್ದಾರೆ. ಹಾಗಾದರೆ ಮೊನ್ನೆ ಶಿವಾಜಿ ಪ್ರತಿಮೆಯನ್ನು ಅನಾವರಣ ಮಾಡುವ ದಿವಸ ನಡೆದಂತಹ ಭಾವನೆಗಳು ಏನು? ಆ ಪ್ರತಿಮೆಯ ಅನಾವರಣವನ್ನೇ ಪ್ರಶ್ನಿಸಿ, ಅನ್ಯಾಯವಾದಂತಹ, ಅಕ್ರಮವಾಗಿ ಸ್ಥಾಪನೆ ಮಾಡುವಂತಹ ಶಿವಾಜಿ ಪ್ರತಿಮೆಯನ್ನು ಸರ್ಕಾರ ಅನಾವರಣ ಮಾಡುವುದನ್ನೇ ವಿರೋಧ ಮಾಡಿ ನಾವು ಅಲ್ಲಿ ಪ್ರತಿಭಟನೆ ಮಾಡಿದ್ದು, ಇದು ಕನ್ನಡಿಗರ ಭಾವನೆ ಅಲ್ಲವೇ? ಇದು ಯಾರ ಭಾವನೆಗಳು?

ಶ್ರೀ ಕೆ.ಹೆಚ್. ರಂಗನಾಥ್ : ಅಕ್ರಮ ಎಂದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ : ಅಕ್ರಮ ಎಂದರೆ ಕ್ರಮವಲ್ಲದೆ ಇರುವುದು.

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೇ, ಇರತಕ್ಕಂತಹ ಕಾನೂನಿಗೆ ವಿರುದ್ಧವಾಗಿ ಎಂದರೆ ಅಕ್ರಮ. ಅದು ಹೇಗೆ ಅಕ್ರಮ, ಹೇಗೆ ಅನ್ಯಾಯ ಎನ್ನುವುದನ್ನು ತಾವು ಸಮರ್ಥನೆ ಮಾಡಬೇಕು. ಶಿವಾಜಿ ಈ ರಾಷ್ಟ್ರದವನಲ್ಲವೇ, ಈ ರಾಷ್ಟ್ರದ ಒಗ್ಗಟ್ಟಿಗೆ ಪ್ರಯತ್ನ ಮಾಡಲಿಲ್ಲವೇ, ಅದಕ್ಕಿಂತ ಹಿಂದೆ ಏನು ಆಗಿತ್ತು? ಈ ದೇಶ ಒಂದೇ ಆಗಿತ್ತೇ? ಇಡೀ ರಾಷ್ಟ್ರ ಒಂದುನೇಷನ್ ಎನ್ನುವ ಪ್ರಯತ್ನ ನಡೆದಿದ್ದು ಯಾವಾಗ? ಇದನ್ನೆಲ್ಲ ಹೇಳಿ? ಏಕೆಂದರೆ ರಾಷ್ಟ್ರ ಪ್ರೇಮಿಗಳ ಬಗ್ಗೆ ತಾವು ಪ್ರಮುಖವಾದಂತಹ ಅಭಿಪ್ರಾಯ ಇಟ್ಟುಕೊಂಡಿರತಕ್ಕಂಥವರು. ರಾಷ್ಟ್ರಪ್ರೇಮ ತಮಗೆ ಇದೆ. ಕರ್ನಾಟಕ ಪ್ರೇಮ ಇರಬೇಕು. ಕರ್ನಾಟಕಕ್ಕಾಗಿ ಇದರಿಂದ ಯಾವ ರೀತಿಯ ತೊಂದರೆಯಾಗುತ್ತದೆ. ಅಕ್ರಮ ಅನ್ಯಾಯ ಶಬ್ದ ನಾವು ಬಳಸುತ್ತೇವೆ. ಆದರೆ ಇದು ಅಕ್ರಮ ಹೇಗೆ ಆಗುತ್ತದೆ? ಯಾವ ಕಾನೂನಿನ ಒಳಗಡೆ ಅಕ್ರಮವವಾಗುತ್ತದೆ. ನಾವು ಎಲ್ಲರೂ ಕೂಡ ಓದುವಾಗ, ಮಾನ್ಯ ಉಪಾಧ್ಯಕ್ಷರೇ, ತಾವೂ ಓದಿದ್ದೀರಿ, ಶಿವಾಜಿ ಬಗ್ಗೆ ಓದುವಾಗ ಬಹಳ ಹೆಮ್ಮೆಯಿಂದ ಓದಿದ್ದೇವೆ. ಕರ್ನಾಟಕ ಏಕೀಕರಣಕ್ಕೆ ಬಹಳ ಶ್ರಮ ಮಾಡಿದಂತಹ ರಾಷ್ಟ್ರದ ನಾಯಕರಲ್ಲಿ ಪ್ರಮುಖವಾಗಿರತಕ್ಕಂತಹ ಇವತ್ತು ಜೀವಂತವಾಗಿರತಕ್ಕಂತಹ, 93 ವರ್ಷದ ಮಾನ್ಯ ನಿಜಲಿಂಗಪ್ಪನವರು ಮೊನ್ನೆ ತಾನೇ ಇದರ ಬಗ್ಗೆ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅವರ ಪ್ರಸ್ತಾಪಕ್ಕೆ ನಾವು ಕರ್ನಾಟಕದ ಜನ, ನನಗಿಂತಲೂ ನಾಗರಾಜ್‌ರವರಿಗಿಂತಲೂ ಈ ಸದನದಲ್ಲಿ ಇರತಕ್ಕಂತಹ ಎಲ್ಲಾ ಸದಸ್ಯರಿಗಿಂತಲೂ ಹೆಚ್ಚಾಗಿ ಕರ್ನಾಟಕದ ಏಕೀಕರಣಕ್ಕೆ ಕೆಲಸ ಮಾಡಿದಂತಹವರು ಮಾನ್ಯ ನಿಜಲಿಂಗಪ್ಪನವರು. ನಾನು ಅದನ್ನು ವಿಷದವಾಗಿ ಹೇಳಬೇಕಾಗಿಲ್ಲ. ಅಂತಹವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ,ಏನೆಂದರೆ, ಸಣ್ಣ ವಿಚಾರವನ್ನು ಪ್ರಚೋದನೆ ಮಾಡುವುದಲ್ಲ. ಇವತ್ತು ರಾಷ್ಟ್ರ ಒಂದಾಗಬೇಕು ಎಂದು ಇರತಕ್ಕಂತಹ ಸಮಯ ಇದು. ಈ ರಾಷ್ಟ್ರಕ್ಕೆ ಎಲ್ಲಾ ಕಡೆಯಿಂದಲೂ ಕೂಡ ಅನ್ಯಾಯ ಆಗತಕ್ಕಂತಹ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಇವತ್ತು ಅಮೇರಿಕದವರು ಕೂಡ ಕಾಶ್ಮೀರದ ಬಗ್ಗೆ ಕೈಹಾಕಿ

ಪ್ರಸ್ತಾಪ ಮಾಡುತ್ತಿದ್ದಾರೆ. ಪಂಜಾಬಿನ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ. ಇಂತಹ ಪರಿಸ್ಥಿತಿ ಇರುವಾಗ ನಮ್ಮ ವಿಚಾರ ಸ್ವಲ್ಪ ದೊಡ್ಡದಾಗಿ ಇರಬೇಕಾಗುತ್ತದೆ. ನಮ್ಮ ಮನಸ್ಸು ವಿಶಾಲವಾಗಿರಬೇಕಾಗುತ್ತದೆ. ಇವತ್ತು ಶಿವಾಜಿ ನಗರ ಇದೆ. ಅದು ನಿನ್ನೆ ಮೊನ್ನೆಯಿಂದ ಇಲ್ಲ. ಇವತ್ತು ಮಹಾರಾಷ್ಟ್ರದ ಮರಾಠಿ ಜನ ಹಾಸುಹೊಕ್ಕಾಗಿ ಬೆಂಗಳೂರಿನಲ್ಲಿ ಇದ್ದಾರೆ, ಕರ್ನಾಟಕದಲ್ಲಿ ಇದ್ದಾರೆ. ಹಳೇ ಮೈಸೂರಿನಲ್ಲಿ ಇದ್ದಾರೆ, ಹೊಸ ಮೈಸೂರಿನಲ್ಲಿ ಇದ್ದಾರೆ. ಚನ್ನಗಿರಿ ತಾಲ್ಲೂಕಿನಲ್ಲಿ ಶಿವಾಜಿಯವರ ತಂದೆಯ ಸಮಾಧಿ ಇದೆ. ಹೀಗೆ ಇರುವಾಗ ನನ್ನ ವಿನಂತಿ ಇಷ್ಟೇ ನಾಗರಾಜ್‌ರವರ ಕನ್ನಡ ಪ್ರೇಮದ ಬಗ್ಗೆ ಸಂಶಯ ಪಡತಕ್ಕಂಥಾದ್ದು ಅಲ್ಲ. ಅವರು ದೊಡ್ಡ ಉದಾತ್ತ ಧ್ಯೇಯ ಇಟ್ಟುಕೊಂಡಿರುವವರು. ಆದರೆ ಇದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕಿಂತ ಪೂರ್ವಭಾವಿಯಲ್ಲಿ ಮತ್ತೇ ಇದರ ಬಗ್ಗೆ ಮರುಚಿಂತನೆ ಮಾಡಿ ಪ್ರಸ್ತಾಪ ಮಾಡಿದರೆ ಒಳ್ಳೆಯದು. ಇದು ಹೇಗೆ ಆಕ್ರಮ, ಅನ್ಯಾಯ ಆಗುತ್ತದೆ ಎಂದು ತಾವು ಹೇಳಿ?

ನಾವು ನಾಲ್ಕು ಕೋಟಿ ಜನರ ಅಭಿಪ್ರಾಯವನ್ನು ಪ್ರಸ್ತಾಪ ಮಾಡತಕ್ಕಂಥ ವೇದಿಕೆ ಈ ವಿಧಾನ ಸಭೆ. ನಾಲ್ಕು ಕೋಟಿಗೂ ಹೆಚ್ಚು ಜನರು ನಾವು ಏನಿದ್ದೇವೆ, ಕನ್ನಡಿಗರಾದ ನಾವು ಅಭಿಪ್ರಾಯವನ್ನು ಪ್ರಸ್ತಾಪ ಮಾಡುತ್ತೇವವೆ. ವೈಯಕ್ತಿಕವಾಗಿ ನನಗೆ ಏನಾದರೂ ಇರಬಹುದು. ವೈಯಕ್ತಿಕ ಅಭಿಪ್ರಾಯವನ್ನು ಕನ್ನಡದ ಎಲ್ಲ ಜನರ ಅಭಿಪ್ರಾಯ ಎಂದು ಪ್ರಸ್ತಾಪ ಮಾಡುವುದು ಸಕಾರಣವಾಗಿದೆಯೋ. ಆದ್ದರಿಂದ ತಾವು ಸ್ವಲ್ಪ ಮರುಚಿಂತನೆ ಮಾಡಿ ಪ್ರಸ್ತಾಪ ಮಾಡತಕ್ಕದ್ದು ಯೋಗ್ಯ ಎಂದು ನನ್ನ ಅಭಿಪ್ರಾಯ.

ಶ್ರೀ ವಾಟಾಳ್ ನಾಗರಾಜ್ : ಶಿವಾಜಿಯವರು ಹೇಗೆ ಇದ್ದರು, ಅವರು ಈ ದೇಶಕ್ಕೆ ಏನು ಮಾಡಿದವರು ಎನ್ನುವುದರ ಬಗ್ಗೆ ಇಲ್ಲಿ ಚರ್ಚೆ ನಡೆಯುತ್ತಿಲ್ಲ. ಅದರ ಬಗ್ಗೆ ನಾನು ಇಲ್ಲಿ ಚರ್ಚೆ ಮಾಡಲಿಕ್ಕೆ ಬಂದಿಲ್ಲ. ನೇರವಾಗಿ ಕರ್ನಾಟಕ ರಾಜ್ಯವನ್ನು ಬೇರೆ ರಾಜ್ಯದ ಮರಾಠಿಯವರನ್ನು, ತಮಿಳರನ್ನು, ಅವರ ಪ್ರತಿಮೆಗಳನ್ನು ಹಾಕತಕ್ಕದ್ದಕ್ಕೆ ಹಾಗೂ ಸಮಾಧಿ ಮಾಡಲಿಕ್ಕೆ ನಾವು ತಯಾರಿಲ್ಲ ಬೇರೆ ರಾಜ್ಯಗಳಲ್ಲಿ ನಮ್ಮವರ ಪ್ರತಿಮೆಗಳಿಲ್ಲ, ತಮಿಳುನಾಡಿನಲ್ಲಿ ನಮ್ಮವರ ಪ್ರತಿಮೆಳಿಲ್ಲ.

ಶ್ರೀ ಕೆ.ಹೆಚ್. ರಂಗನಾಥ : ಅವರನ್ನು ಮಾಡಿ ಎಂದು ಕೇಳೋಣ. ಮಾಡದೇ ಇದ್ದರೆ ಮಾಡಬೇಕು ಎಂದು ಹೇಳೋಣ

ಶ್ರೀ ವಾಟಾಳ್ ನಾಗರಾಜ್ : ತಾವು ಉಪದೇಶ ಹೇಳುವುದರಲ್ಲಿ ಮುಂದಾಗಿದ್ದೀರಿ. ಕರ್ನಾಟಕದ ಪರಿಸ್ಥಿತಿ ಏನಾಗಿದೆ ಎಂದು ಹೇಳಿ.

ಶ್ರೀ ಕೆ.ಹೆಚ್. ರಂಗನಾಥ್ : ನಾನು ಉಪದೇಶ ಮಾಡಲಿಕ್ಕೆ ನಿಂತಿಲ್ಲ. ಕನ್ನಡ ಸಾಹಿತ್ಯಕ್ಕೆ ಶಂಭಾಜೋಷಿ, ದೊಡ್ಡ ಕೊಡುಗೆಯನ್ನು ಕೊಟ್ಟಿದ್ದಾರೆ. ಬೇಂದ್ರೆಯವರನ್ನು ಅವರು ನಮಗೆ ದೊಡ್ಡ ಕೊಡುಗೆಯನ್ನಾಗಿ ಕೊಟ್ಟಿದ್ದಾರೆ. ಅವರು ಹುಟ್ಟಿನಿಂದ ಮರಾಠಿಗರು. ಸಾಹಿತ್ಯ ಪರಿಷತ್ತಿನಲ್ಲಿ ಬೇಂದ್ರೆಯವರನ್ನು ಅಧ್ಯಕ್ಷರನ್ನಾಗಿ ಮಾಡಲಿಲ್ಲವೇ ನಾವು. ಹಾಗೆಯೇ ಬೇರೆ ರಾಜ್ಯದಲ್ಲಿ ಕೂಡ ಇಲ್ಲದೇ ಹೋಗಿದ್ದರೆ ಮಾಡಿ ಎಂದು ಕೇಳೋಣ. ಅವರಿಗೆ ಒತ್ತಾಯ ಮಾಡೋಣ. ಆದರೆ ಅದಕ್ಕೂ, ಇದಕ್ಕೂ ತಾಳಿ ಹಾಕಿ ಮಾತನಾಡತಕ್ಕದ್ದು ಸರಿಯಲ್ಲ. ನಾನು ಅದಕ್ಕೆ ಹೇಳಿದೆ, ನಮಗಿಂತ ದೊಡ್ಡವರು ಕರ್ನಾಟಕಕ್ಕೆ ಕೆಲಸ ಮಾಡಿದ್ದಾರೆ. ಮಾನ್ಯ ನಿಜಲಿಂಗಪ್ಪನವರು ಮೊನ್ನೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ತಾವು ಮರು ಚಿಂತನೆ ಮಾಡುವುದು ಒಳ್ಳೆಯದು ಎಂದು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದು ಭಾವನಾತ್ಮಕವಾಗಿ ಕನ್ನಡಿಗರ ಮನಸ್ಸನ್ನು ಕೆರಳಿಸಿದೆ. ಇವರು ಹೇಗೆ ಹೇಳಬಹುದು. ಆದರೆ ನಾನು ಇದನ್ನು ಅತ್ಯಂತ ವೇದನೆಯಿಂದ ಹೇಳುತ್ತಿದ್ದೇನೆ.

ಶ್ರೀ ಕೆ. ಹೆಚ್. ರಂಗನಾಥ್ : ಮಾನ್ಯ ನಾಗರಾಜ್‌ರವರು ಅವರು ಮನಸ್ಸನ್ನು ಕೆರಳಿಸಿದೆ ಎಂದು ಹೇಳಬಹುದು. ನಾನೂ ಕನ್ನಡಿಗನೇ, ನಮ್ಮ ಅಪ್ಪ ಕನ್ನಡಿಗ, ನಮ್ಮ ಅಜ್ಜ ಕನ್ನಡಿಗ ನಮ್ಮ ಮುತ್ತಾತ ಕನ್ನಡಿಗ, ಆದರೆ ಈ ಬಗ್ಗೆ ನನ್ನ ಮನಸ್ಸನ್ನು ಏನೂ ಕೆರಳಿಸಲಿಲ್ಲ ಸ್ವಾಮಿ. ನಿಜಲಿಂಗಪ್ಪನವರ ಮನಸ್ಸನ್ನು ಕೆರಳಿಸಲಿಲ್ಲ. ಹೇಗೆ ನೀವು ನಿಜಲಿಂಗಪ್ಪನವರ ಪರವಾಗಿ, ನನ್ನ ಪರವಾಗಿ ಹೇಳುತ್ತಿದ್ದೀರಿ. ನೀವು ನನ್ನ ಮನಸ್ಸನ್ನು ಕೆರಳಿಸಿದೆ ಎಂದು ಹೇಳಬಹುದು, ಅದನ್ನು ಒಪ್ಪಬಹುದು.

ಶ್ರೀ ವಾಟಾಳ್ ನಾಗರಾಜ್ : ಈ ಕರ್ನಾಟಕ ರಾಜ್ಯದಲ್ಲಿ ಬೇರೆ ರಾಜ್ಯಗಳ ವರ ಪ್ರತಿಮೆಗಳನ್ನುಹಾಕಲು ಇದೊಂದು ಸ್ಮಾರಕ ಭೂಮಿ ಏನಲ್ಲ ಮಹಾರಾಷ್ಟ್ರದಲ್ಲಿ ಎಲ್ಲಿದೆ ಎಂದು ನೀವ್ಯಾರಾದರೂ ಕೇಳಿದ್ದೀರಾ. ತಾವು ಮಹಾರಾಷ್ಟ್ರದಲ್ಲಿ ಹೋಗಿ ನೋಡಿ, ಕರ್ನಾಟಕ ರಾಜ್ಯದ ಚರಿತ್ರಾರ್ಹ ಪುರುಷರ ಒಂದು ಪ್ರತಿಮೆಯನ್ನು ಹಾಕಿ ಎಂದು ಹೇಳಿ. ನಿಮ್ಮ ಸರ್ಕಾರದವರು ಮೊದಲು ಏನು ಮಾಡಿದಿರಿ, ನೀವು ಹೇಳಲಿಲ್ಲ ಕೇಳಲಿಲ್ಲ, ತಿರುವಳ್ಳೂರು ಪ್ರತಿಮೆಯನ್ನು ಹಾಕಿದಿರಿ. ಪೆರಿಯಾರ್ ನಗರ ಸ್ಥಾಪನೆ ಮಾಡಿದಿರಿ. ಮುಂದೆ ಹೀಗೆ ತರುತ್ತೀರಿ. ನಾನು ಸರ್ಕಾರವನ್ನು ನೇರವಾಗಿ ಕೇಳುತ್ತಿದ್ದೇನೆ. ಇದರಲ್ಲಿ ಸರ್ಕಾರದ ಹಸ್ತಕ್ಷೇಪ ಇದೆ, ಸರ್ಕಾರ ಈ ಪ್ರತಿಮೆಯನ್ನು ಕೂಡಲೇ ತೆಗೆಸಬೇಕು. ಇದರ ಬಗ್ಗೆ ಸರ್ಕಾರವನ್ನು ನಾನು ನೇರವಾಗಿ ಒತ್ತಾಯ ಮಾಡುತ್ತೇನೆ. ಸರ್ಕಾರದ ಉಪದೇಶವನ್ನು ನಾನು ಕೇಳಲಿಕ್ಕೆ ಬಂದಿಲ್ಲ. ಸರ್ಕಾರದ ಒಂದು ಇತಿಹಾಸವನ್ನು ಕೇಳಲಿಕ್ಕೆ ನಾನು ಬಂದಿಲ್ಲ. ಇವೊತ್ತು ಇತಿಹಾಸದ ಬಗ್ಗೆ ಚರ್ಚೆ ಮಾಡುವುದಾದರೆ ಚರ್ಚೆ ಬೇರೆ ಮಾಡೋಣ. ಇವೊತ್ತು ತಾವು ಪ್ರತಿಮೆಯನ್ನು ಹಾಕಿರುವುದು ಅಕ್ರಮ ಎಂದು ನಾನು ಹೇಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಅದು ಹೇಗೆ, ಅದು ಯಾವ ಕಾನೂನಿಗೆ ವಿರುದ್ಧವಾದುದು, ಇದೇನಾದರೂ ರಾಜ್ಯಾಂಗಕ್ಕೆ ವಿರುದ್ಧವಾದುದೆ, ಯಾವ ಕಾನೂನಿಗೆ ವಿರುದ್ಧ ಹಾಗೂ ಅಕ್ರಮ ಎಂದು ಹೇಗೆ ಹೇಳುತ್ತೀರಾ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾನು ಈ ಹೇಳಿಕೆಯನ್ನು ಒಪ್ಪುವುದಿಲ್ಲ, ನಿಮ್ಮ ಹೇಳಿಕೆ ಬಗ್ಗೆ ನನಗೆ ನಂಬಿಕೆ ಇಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ಅದು ಅಕ್ರಮ ಎಂದು ಹೇಗೆ ಹೇಳುತ್ತೀರಿ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ನೀವು ಅಕ್ರಮವಾಗಿ ಸ್ಥಾಪಿಸಿದ್ದೀರಿ. ರಾತ್ರೋರಾತ್ರಿ ಈ ಪ್ರತಿಮೆಯನ್ನು ಸ್ಥಾಪಿಸಿದ ಈ ಪ್ರತಿಮೆಯ ಬಗ್ಗೆ ಪ್ರಾರಂಭದಿಂದ, ಹೆಜ್ಜೆ ಹೆಜ್ಜೆಗೂ ವಿರೋಧಮಾಡಿದ್ದೇನೆ. ಈ ಕರ್ನಾಟಕ ರಾಜ್ಯವನ್ನು ಪರರಾಜ್ಯದವರ ಪ್ರತಿಮೆಗಳನ್ನು ಹಾಕತಕ್ಕ ಭೂಮಿಯನ್ನಾಗಿ ಮಾಡಬಾರದೆಂದು ಪ್ರತಿ ಹೆಜ್ಜೆಗೂ ನಾನು ಹೇಳಿದ್ದೇನೆ.ಇದರ ಬಗ್ಗೆ ಉಪದೇಶ ಹೇಳುವವರಿದ್ದಾರೆ. ಇದರ ಬಗ್ಗೆ ಚಳುವಳಿಯನ್ನು ಮಾಡುವವರನ್ನು ಬಂಧನ ಮಾಡುತ್ತಾರೆ. ಈ ಸರ್ಕಾರದ ಈ ನೀತಿಯನ್ನು ನಾನು ಸ್ಪಷ್ಟವಾಗಿ ವಿರೋಧ ಮಾಡುತ್ತಿದ್ದೇನೆ. ಆ ಪ್ರತಿಮೆಯನ್ನು ತೆಗೆಯುತ್ತೇವೆಂದು ಸರ್ಕಾರ ಇಲ್ಲ ನೇರವಾಗಿ ಹೇಳಬೇಕು. ಆ ರೀತಿ ಹೇಳುವವರೆಗೂ ನಾನು ಇಲ್ಲಿ ಧರಣಿ ಮಾಡುತ್ತೇನೆ ಇವರ ನೀತಿ ಸರಿಯಿಲ್ಲ ಈ ಸರ್ಕಾರದ ನೀತಿ ಏನಿದೆ ಇದು

ಕನ್ನಡದ ವಿರೋಧಿ ನೀತಿ. ಕನ್ನಡ ಜನತೆಯ ಭಾವನೆಯನ್ನು ಕೆರಳಿಸುವ ನೀತಿ. ಇದು ಕೆಟ್ಟ ನೀತಿ. ಈ ನೀತಿಯನ್ನು ನಾನು ಒಪ್ಪುವುದಿಲ್ಲ.

ಉಪಾಧ್ಯಕ್ಷರು : ನಾಗರಾಜ್‌ರವರೇ, ತಾವು ಅರ್ಥಮಾಡಿಕೊಳ್ಳಿ. ಇದು ಗಮನ ಸೆಳೆಯುವ ಸೂಚನೆ. ನಿಮಗೇನಾದರೂ ಕ್ಲಾರಿಫಿಕೇಷನ್ ಬೇಕಾಗಿದ್ದರೆ ಕೇಳಿ, ಉತ್ತರ ಕೊಡಿಸೋಣ.

ಶ್ರೀ ವಾಟಾಳ್ ನಾಗರಾಜ್ : ಈ ರಾಜ್ಯದ ಸಮಗ್ರ ಜನತೆಯ ಪರವಾಗಿ ಹೇಳುತ್ತಿದ್ದೇನೆ. ಇದು ಸರ್ಕಾರದ ಸರಿಯಾದ ನೀತಿಯಲ್ಲ. ನಿಮ್ಮ ಸರ್ಕಾರದ ಧೋರಣೆ ಸರಿಯಲ್ಲ. ನಿಮ್ಮ ಸರ್ಕಾರ ಇದನ್ನು ಪ್ರಾರಂಭ ಮಾಡಲಿಲ್ಲ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಸರ್ಕಾರದವರು ಇದನ್ನು ಪ್ರಾರಂಭ ಮಾಡಿದವರು. ಮಾನ್ಯ ಮುಖ್ಯಮಂತ್ರಿಗಳು ಆ ಅನಾವರಣ ಸಮಾರಂಭಕ್ಕೆ ಹೋಗುವುದು ತಪ್ಪು ಎಂದು ನಾನು ಹೇಳುತ್ತಿದ್ದೇನೆ.

(ಈ ಸಂದರ್ಭದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ವಿಧಾನ ಸಭಾಧ್ಯಕ್ಷರ ಮುಂದಿನ ಆವರಣದಲ್ಲಿ ಧರಣಿ ಕುಳಿತರು)

ಶ್ರೀ ಕೆ. ಹೆಚ್. ರಂಗನಾಥ್ : ವೈಯುಕ್ತಿಕವಾಗಿ ನಾನು ಹೇಳುವುದಾದರೆ, ಮಾನ್ಯ ರಾಮಕೃಷ್ಣ ಹೆಗಡೆಯವರು ಏನು ಈ ನೀತಿಯನ್ನು ಪ್ರಾರಂಭ ಮಾಡಿದ್ದಾರೆ ಅದು ಸ್ಮರ್ತವ್ಯಾರ್ಹವಾದುದು; ಹೆಗಡೆಯವರು ಪ್ರಶಂಸನೀಯವಾದ ಕೆಲಸವನ್ನು ಮಾಡಿದ್ದಾರೆ.

(ಗೊಂದಲ)

1.30 ಪಿ.ಎಮ್.

+ ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷರೆ, ತಮಗೆ ನಮ್ಮ ಸಭೆಯ ನಡವಳಿಕೆಗಳು ಚೆನ್ನಾಗಿ ಗೊತ್ತಿದೆ. ತಮ್ಮಲ್ಲಿ ನಾನು ವಿಶೇಷವಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ಗಮನ ಸೆಳೆಯುವ ಸೂಚನೆಗೆ ಸಹಿ ಮಾಡದೇ ಇರುವ ಸದಸ್ಯರು ಇದರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಇಲ್ಲ. ನಾನು ಜವಾಬ್ದಾರಿ ಸ್ಥಾನದಲ್ಲಿದ್ದೇನೆ. ತಾವು ಕಾನೂನನ್ನು ಪಕ್ಕಕ್ಕಿಟ್ಟು ನನಗೆ ಅವಕಾಶವನ್ನು ಮಾಡಿಕೊಟ್ಟಿರುವುದರಿಂದ ನಾನು ಕೇವಲ ಒಂದೆರಡು ಮಾತಿನಲ್ಲಿ ಮುಗಿಸುತ್ತೇನೆ. ಮಾನ್ಯ ರಾಮಕೃಷ್ಣ ಹೆಗಡೆಯವರ ಸರ್ಕಾರ ಇದ್ದಾಗ ಬೆಂಗಳೂರಿನಲ್ಲಿ ಶಿವಾಜಿ ಮಹಾರಾಜರು ಕೆಲವು ವರ್ಷಗಳನ್ನು ಕಳೆದರು ಎಂಬ ಒಂದು ಕಾರಣ, ಇನ್ನೊಂದು ಕಾರಣ ಶಿವಾಜಿಯವರ ತಂದೆ ಷಾಜಿಯವರ ಗೋರಿ ಶಿವಮೊಗ್ಗಾ ಜಿಲ್ಲೆಯ ಚನ್ನಗಿರಿಯಲ್ಲಿದೆ ಎಂಬ ಒಂದು ಕಾರಣದಿಂದ ಹಾಗೂ ಮರಾಠಿಯನ್ನು ಮಾತನಾಡತಕ್ಕ ಮಹಾರಾಷ್ಟ್ರದ ಜನ ಇಲ್ಲಿ ಯಾರಿದ್ದಾರೆ, ಅವರು ಹಾಗೂ ಕರ್ನಾಟಕದ ಜನರ ಭಾವೈಕ್ಯದ ದ್ಯೋತಕವಾಗಿ ಇಲ್ಲಿರತಕ್ಕ ಕೆಲವು ಸ್ಥಳೀಯ ಸಂಘ ಸಂಸ್ಥೆಗಳು ನಮ್ಮ ಸರ್ಕಾರಕ್ಕೆ ಮನವಿಯನ್ನು ಮಾಡಿಕೊಂಡು ಈ ಪುತ್ಥಳಿಯನ್ನು ಇಲ್ಲಿ ಅನಾವರಣ ಮಾಡಬೇಕು, ಅಲ್ಲದೆ ಇಲ್ಲಿ ಶಿವಾಜಿ ನಗರ ಎಂಬ ಎಕ್ಸ್‌ಟೆನ್‌ಷನ್ ಇದೆ ಎಂಬ ಉದ್ದೇಶದಿಂದಲೂ ಕೇಳಿರತಕ್ಕದ್ದು ನಿಜ. ಹಿರಿಯ ಸಚಿವರಾದ ನಮ್ಮೆಲ್ಲರ ಗೌರವಕ್ಕೆ ಪಾತ್ರವಾಗಿರುವ ಮಾನ್ಯ ಕೆ.ಹೆಚ್. ರಂಗನಾಥ್ ರವರು ಬಹಳ ಚೆನ್ನಾಗಿ ದ.ರಾ.ಬೇಂದ್ರೆಯವರ ಬಗ್ಗೆ ಮಾತನಾಡುತ್ತಾ ಏನೇನು ಆಗಿದೆ ಎಂಬುದನ್ನು ಹೇಳಿದ್ದಾರೆ. ಇತ್ತೀಚೆಗೆ ಮಾನ್ಯ ಎಸ್.ಎಲ್.ಭೈರಪ್ಪನವರನ್ನು ಮರಾಠಿ ಸಾಹಿತ್ಯ ಸಮ್ಮೇಳನದಲ್ಲಿ ಪ್ರಾಸ್ತಾವಿಕ ಭಾಷಣ ಮಾಡುವುದಕ್ಕೆ ಕೂಡ ಕರೆಸಿಕೊಂಡು ಭಾಷಣ ಮಾಡಿಸಿರತಕ್ಕದ್ದು ತಮಗೆ ಗೊತ್ತಿದೆ. ಆದರೆ ದುರ್ದೈವದಿಂದ ಒಂದು ಮಾತನ್ನು ಹೇಳಬೇಕಾಗಿದೆ. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿರುವಂಥ

ಮಾತಿನಿಂದ ನಾನು ಅದನ್ನು ಅರ್ಥಮಾಡಿಕೊಂಡಿದ್ದೇನೆ. ಈ ಕಾರ್ಯಕ್ರಮದಲ್ಲಿ ನಾನೂ ಕೂಡ ಭಾಗವಹಿಸಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಬರಬೇಕೆಂದು ಹೇಳಿರುವವರಲ್ಲಿ ನಾನೂ ಕೂಡ ಒಬ್ಬ. ಮಾನ್ಯ ರಾಮಕೃಷ್ಣ ಹೆಗಡೆಯವರು ಅಲ್ಲಿಗೆ ಹೋಗುವುದಕ್ಕೆ ನಾನು ಕಾರಣಕರ್ತ. ಜೀವರಾಜ ಆಳ್ವಾರವರು ಬರುತ್ತಿದ್ದಾರೆ, ನೀವೂ ಬರಬೇಕೆಂದು ಹೇಳಿದ್ದರು. ನಾನು ಕೂಡ ಅದರಲ್ಲಿ ಭಾಗವಹಿಸಿದ್ದೆ. ಆದರೆ ಅಲ್ಲಿ ಕನ್ನಡದ ಪರವಾಗಿ ಯಾರು ಪ್ರದರ್ಶನ ಮಾಡಿದರು ಅವರಿಗೆ ಲಾಠಿ ಏಟು ಆಗಿದೆ, ಅವರನ್ನನು ಅರೆಸ್ಟ್ ಮಾಡಿರುವುದನ್ನು ಖಂಡಿಸಬೇಕು ಎನ್ನತಕ್ಕದ್ದು ಒಂದು ಭಾಗ, ಆದರೆ ಕನ್ನಡಿಗರ ಭಾವನೆಯನ್ನು ಇದು ಯಾವ ರೀತಿ ಕೆರಳಿಸುತ್ತದೆಂದು ನನಗೆ ಅರ್ಥವಾಗುತ್ತಿಲ್ಲ. ಆದರೆ ದುರ್ದೈವದಿಂದ ಇವತ್ತು ಏನಾಗಿದೆ ಎಂದರೆ, ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರು ಮಾನ್ಯ ರಾಜ್ಯಪಾಲರ ಭಾಷಣ ಆಗುವಾಗ ಅನೇಕಸಾರಿ ಇಲ್ಲಿ ವಿರೋಧಮಾಡಿದ್ದಾರೆ. ಆದರೆ ಈ ಸಾರಿ ಏನೋ ತಿಳಿಯದು, ಅವರು ಈ ಸಾರಿ ರಾಜ್ಯಪಾಲರ ಭಾಷಣಕ್ಕೆ ಬರಲಿಲ್ಲ. ಅವರು ಬರದೇ ಇದ್ದಿದ್ದು ಒಳ್ಳೆಯದೇ ಆಯಿತು. ಅವರು ಬಂದಂಥ ಸಂದರ್ಭದಲ್ಲಿ ಶಿವಾಜಿ ಮಹಾರಾಜರನ್ನು ಒಂದು ಭಾಷೆಯ, ಒಂದು ಗಡಿಯ ನಾಯಕನನ್ನಾಗಿ ಮಾಡಿಕೊಂಡು ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಈ ರಾಷ್ಟ್ರದ ಒಂದು ಜಾತಿಯ ನಾಯಕನನ್ನಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇವತ್ತು ಮಾನ್ಯ ಬಿ.ಆರ್. ಅಂಬೇಡ್ಕರ್‌ರವರು ಕೇವಲ ಒಂದು ವರ್ಗದ ನಾಯಕರಲ್ಲ. ಈ ದೇಶದ ಸಂವಿಧಾನವನ್ನು ಬರೆದಂಥ ಮಹಾ ಪುರುಷರು. ಅವರೂ ಕೂಡ ಮಹಾರಾಷ್ಟ್ರದವರು. ಅವರ ಬಗ್ಗೆ ಇಲ್ಲಿ ನಾವು ಯಾರೂ ಕೂಡ ವಿರೋಧ ಮಾಡುವುದಿಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರೂ ಕೂಡ ವಿರೋಧ ಮಾಡುವುದಿಲ್ಲ. ಏತಕ್ಕೆ ಮಾಡುವುದಿಲ್ಲ? ಈ ಎಂ.ಇ.ಎಸ್.ನವರದ್ದು ಒಂದು ಪ್ರವೃತ್ತಿ ಇದೆ. ಬೆಳಗಾಂ ಜಿಲ್ಲೆ ಏನಿದೆ ಇದು ಮಹಾರಾಷ್ಟ್ರಕ್ಕೆ ಸೇರಬೇಕೆಂಬ ವಿಚಾರಧಾರೆಯಿಂದಾಗಿ ಇದನ್ನು ಮಾಡುತ್ತಿದ್ದಾರೆ. ಇವರು 4 ಜನ ಏನಿದ್ದಾರೆ ಇವರು ಗೆದ್ದು ಬರುವುದಕ್ಕಾಗಿ ಶಿವಾಜಿ ಮಹಾರಾಜರನ್ನು ಎಂ.ಇ.ಎಸ್.ನವರ ಒಂದು ಸಂಕೇತವೆಂದು ಮಾಡಿಕೊಂಡಿದ್ದಾರೆ. ನಾನಾದರೂ ಹೇಳುತ್ತೇನೆ, ನಮ್ಮ ಕರ್ನಾಟಕದಲ್ಲಿರತಕ್ಕ ಮರಾಠಿಯನ್ನು ಮಾತನಾಡತಕ್ಕ ಜನ ಯಾರಿದ್ದಾರೆ, ಅದೇ ರೀತಿ ಮಹಾರಾಷ್ಟ್ರದಲ್ಲಿ ಕನ್ನಡವನ್ನು ಮಾಡನಾಡತಕ್ಕ ಜನ ಯಾರಿದ್ದಾರೆ ಇವರಿಬ್ಬರ ಹಿತದೃಷ್ಟಿಯಿಂದ ಮೊದಲನೇ ಕೆಲಸ ಏನು ಆಗಬೇಕೆಂದರೆ, ಮಹಾರಾಷ್ಟ್ರ ಏಕೀಕರಣ ಸಮಿತಿಯನ್ನು ಮೊದಲು ಡಿಸಾಲ್ವ್ ಮಾಡಬೇಕು. ಈಗಾಗಲೇ ಬೀದರ್ ನಲ್ಲಿ ಡಿಸಾಲ್ವ್ ಆಗಿದೆ. ಅಲ್ಲಿಯ ಜನರೇ ಇದನ್ನು ರಿಜೆಕ್ಟ್ ಮಾಡಿದ್ದಾರೆ. ದುರ್ದೈವದಿಂದ ಏನಾಗಿದೆ ಎಂದರೆ, ಈ ಎಂ.ಇ.ಎಸ್.ನವರು ಶಿವಾಜಿ ಮಹಾರಾಜರನ್ನು ಒಂದು ಜಾತಿಯ, ಒಂದು ಪ್ರಾಂತ್ಯದ ಮತ್ತು ಬಹಳ ಸೂಕ್ಷ್ಮವಾದ ಗಡಿ ವಿಚಾರದ ಬಗ್ಗೆ ಶಿವಾಜಿ ಮಹಾರಾಜ್ ಜಿಂದಾಬಾದ್ ಎನ್ನತಕ್ಕದ್ದು ಆಗುತ್ತಿದೆ. ಇದರಿಂದಾಗಿ ಮಹಾರಾಷ್ಟ್ರದಲ್ಲಿರತಕ್ಕ ಪುಂಡಪೋಕರಿಗಳು ಅಥವಾ ಬೆಳಗಾಂ ಮಹಾರಾಷ್ಟ್ರಕ್ಕೆ ಸೇರಬೇಕೆಂದು ಹೇಳತಕ್ಕ ಜನ ಯಾರಿದ್ದಾರೆ ಇವರ ಪ್ರತೀಕವಾದ ಶಿವಾಜಿಯನ್ನು ಇಲ್ಲಿ ನಿಲ್ಲಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂಬ ಭಾವನೆ ನಮ್ಮ ಜನರ ಮನಸ್ಸಿನಲ್ಲಿ ಏನಿದೆ ಇದು ನಮ್ಮ ಕೆಲವು ಜನರ ಮನಸ್ಸನ್ನು ಕೆರಳಿಸಿರಬಹುದು.

ಆದ್ದರಿಂದ ನಾನು ಮಾನ್ಯ ವಾಟಾಳ್ ನಾಗರಾಜ್ ಅವರಲ್ಲಿ ಮನವಿ ಮಾಡಿಕೊಳ್ಳುವುದು ಏನೆಂದರೆ, ಈ ವಿಚಾರದಲ್ಲಿ ಬಹಳ ಮುಖ್ಯವಾಗಿ ಈ ರಾಷ್ಟ್ರದ ಐಕ್ಯತೆ ಮತ್ತು ರಾಷ್ಟ್ರದ ಸಮಗ್ರತೆ ದೃಷ್ಟಿಯಿಂದ ನಾವೆಲ್ಲರೂ ಪ್ರಯತ್ನ ಮಾಡಬೇಕು. ಅನೇಕ ಸಂದರ್ಭಗಳಲ್ಲಿ ನಾವು ಇಲ್ಲಿ ಚರ್ಚೆ ಮಾಡಿದ್ದೇವೆ. ಎಲ್ಲಾ ಕೋಮಿನವರು ಎಲ್ಲಾ ಧರ್ಮದವರು, ಎಲ್ಲಾ ಜಾತಿಯವರೂ ಸಮಾನರು ಎಂಬ ಭಾವನೆಯಿಂದ

ದುಡಿಯಬೇಕೆಂದು ಚರ್ಚೆ ಮಾಡಿದ್ದೇವೆ. ಬಾಬ್ರಿ ಮಸೀದಿಯನ್ನು ಕೆಡವಿದ್ದರ ಬಗ್ಗೆ ನಾವು ದುಃಖಿಪಡುತ್ತೇವೆ. ಏಕೆಂದರೆ ರಾಷ್ಟ್ರದ ಸಮಗ್ರತೆಗೆ ಧಕ್ಕೆ ಬರುತ್ತದೆ ಎಂಬ ದೃಷ್ಟಿಯಿಂದ, ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಮತ್ತು ಮೂಲ ಭೂತ ವಾಸಿಗಳು ಏನಿದ್ದಾರೆ ಅವರು ಶಿವಾಜಿಯನ್ನು ಈ ಮಟ್ಟಕ್ಕೆ ತೆಗೆದುಕೊಂಡು ಹೋಗತಕ್ಕ ಪ್ರಯತ್ನ ಏನಿದೆ, ಇದನ್ನು ಖಂಡಿಸಬೇಕು. ಎರಡನೆಯದಾಗಿ, ಮರಾಠಿ ಮಾತನಾಡತಕ್ಕ ಪ್ರತಿಯೊಬ್ಬರೂ ಸಹ ಇದನ್ನು ಗಮನಿಸಬೇಕು. ಕರ್ನಾಟಕದ ಇತಿಹಾಸ ಸಾವಿರಾರು ವರ್ಷಗಳಿಂದ ಇರತಕ್ಕದ್ದು ಎಂದು ಪಾಟೀಲ್ ಪುಟ್ಟಪ್ಪನವರು ಹೇಳಿದ್ದಾರೆ ಮತ್ತು ನಿಜಲಿಂಗಪ್ಪನವರು ಹೇಳಿದ್ದಾರೆ. ಮುಂಬೈ ಪ್ರಾಂತ್ಯದಲ್ಲಿ ಕಾರವಾರ ಇತ್ತು, ಬೆಳಗಾಂ ಇತ್ತು, ಬಿಜಾಪುರ ಇತ್ತು, ಧಾರವಾಡ ಇತ್ತು. ಅಲ್ಲಿರತಕ್ಕ ಮೂಲ ನಿವಾಸಿಗಳು, ಮರಾಠಿ ಮಾತನಾಡತಕ್ಕವರು ಕನ್ನಡದವರು ಅಲ್ಲವೇ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಆದುದರಿಂದ ಇದೆಲ್ಲವನ್ನೂ ನಾವು ಮರೆಯಬೇಕಾಗುತ್ತದೆ. ಇವತ್ತು ಕರ್ನಾಟಕ ಏಕೀಕರಣವಾದ ಮೇಲೆ ಎಂ.ಇ.ಎಸ್.ಗೆ ಕರ್ನಾಟಕದಲ್ಲಿ ಜಾಗ ಇಲ್ಲ. ಬೆಳಗಾಂ ಎಂದೆಂದಿಗೂ ಸಹ ಕರ್ನಾಟಕದ ಒಂದು ಭಾಗ ಆಗಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇದು ನಮ್ಮೆಲ್ಲರ ಒಂದು ಒತ್ತಾಯ ಎರಡನೆಯದಾಗಿ ವಿಶ್ವೇಶ್ವರಯ್ಯನವರ ಪ್ರತಿಮೆ ಹೈದರಾಬಾದ್‌ನಲ್ಲಿ ಇದೆ. ಅವರು ಕರ್ನಾಟಕದ ಸುಪುತ್ರ. ಬಸವೇಶ್ವರರ ಪ್ರತಿಮೆ ಒಂದಲ್ಲ ಸಾವಿರಾರು ಪ್ರತಿಮೆಗಳು ಇವತ್ತು ಮಹಾರಾಷ್ಟ್ರದಲ್ಲಿವೆ. ಇದು ನಾವು ಗಮನಿಸಬೇಕಾದಂಥ ಅಂಶ. ಇವತ್ತು ನಮ್ಮ ಬೀದರ್ ಜಿಲ್ಲೆಯ ಶಾಸಕರು ಇಲ್ಲಿ ಇದ್ದಾರೆ. ಬೀದರ್ ಜಿಲ್ಲೆ ಮತ್ತು ಭೂಕಂಪವಾಗಿರತಕ್ಕ ಮಹಾರಾಷ್ಟ್ರದ ಇತರೇ ಜಿಲ್ಲೆಗಳು, ಏನಿವೆ ಅಲ್ಲಿ ಮತ್ತು ಲೂತೂರ್ ಏನಿದೆ ಅಲ್ಲಿ ಬಸವೇಶ್ವರರ ಪ್ರತಿಮೆಗಳು ಪ್ರತಿಯೊಂದು ಹಳ್ಳಿಗಳಲ್ಲೂ ಇವೆ.ಇವತ್ತು ಕರ್ನಾಟಕದ ಪಕ್ಕದಲ್ಲಿ ಮಹಾರಾಷ್ಟ್ರದ ಯಾವ ಯಾವ ಜಿಲ್ಲೆಗಳಿವೆ ಅಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ಕಿತ್ತೂರು ರಾಣಿ ಚೆನ್ನಮ್ಮ ಬಸವೇಶ್ವರರು, ಕನಕದಾಸರು. ಹೀಗೆ ಇವರೆಲ್ಲರ ಸಾವಿರಾರು ಪ್ರತಿಮೆಗಳು ಇವೆ.

ಶ್ರೀ ಕೆ.ಹೆಚ್. ರಂಗನಾಥ್ : ಅವರ ವ್ಯವಹಾರದಲ್ಲಿ ಮೋಡಿ, ಅಕ್ಷರ ಕೂಡ ಮರಾಠಿಯಲ್ಲಿರುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಒಂದು ಒತ್ತಾಯವನ್ನು ನಾವು ಮಾಡೋಣ. ಇವತ್ತು ಬೊಂಬಾಯಿಯಲ್ಲಿರತಕ್ಕ ಕನ್ನಡಿಗರು, ಕಿತ್ತೂರು ರಾಣಿ ಚೆನ್ನಮ್ಮನ ಪ್ರತಿಮೆಯನ್ನು ಮುಂಬೈಯಲ್ಲಿ, ಪೂನಾದಲ್ಲಿ ಪ್ರತಿಷ್ಠಾಪನೆ ಮಾಡಬೇಕೆಂಬ ಒತ್ತಾಯವನ್ನು ತಂದರೆ ಅದಕ್ಕೆ ಮಹಾರಾಷ್ಟ್ರ ಸರ್ಕಾರ ಅವಕಾಶ ಕೊಡದಿದ್ದರೆ ಅದನ್ನು ನಾವು ಖಂಡಿಸಬೇಕು. ಇವತ್ತು ಮಹಾರಾಷ್ಟ್ರ ಸರ್ಕಾರದವರ ಮೇಲೆ ಒತ್ತಾಯವನ್ನು ತರೋಣ. ಎಲ್ಲೆಲ್ಲಿ ನಮ್ಮ ಕನ್ನಡಿಗರು ಪ್ರತಿಮೆಗಳನ್ನು ಹಾಕಬೇಕೆಂದು ಹೇಳುತ್ತಾರೆ ಅದಕ್ಕೆ ಸಂಪೂರ್ಣ ಸಹಕಾರವನ್ನು ಕೊಡಬೇಕೆಂದು ಹೇಳುವುದರ ಜೊತೆಗೆ, ಕರ್ನಾಟಕದಲ್ಲಿರತಕ್ಕ ಧೀಮಂತ ನಾಯಕರು, ರಾಷ್ಟ್ರ ನಾಯಕರು ಆಗಿ ದುಡಿದಿರತಕ್ಕ ಕನಕದಾಸರು ಇರಬಹುದು. ಪುರಂದರದಾಸರು ಇರಬಹುದು. ಬಸವೇಶ್ವರರು ಇರಬಹುದು. ಮತ್ತೊಬ್ಬರು ಇರಬಹುದು. ಬೆಳವಡಿ ಮಲ್ಲಮ್ಮ ಕಿತ್ತೂರು ರಾಣಿ ಚೆನ್ನಮ್ಮ ಇರಬಹುದು ಇವರೆಲ್ಲರ ಪ್ರತಿಮೆಗಳನ್ನು ಆ ರಾಜ್ಯದ ಎಲ್ಲ ಪ್ರದೇಶಗಳಲ್ಲಿ ಹಾಕುವುದಕ್ಕೆ ಮಹಾರಾಷ್ಟ್ರ ಸರ್ಕಾರವನ್ನು ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡೋಣ. ಈ ಸಂದರ್ಭದಲ್ಲಿ ತಾವು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿರುವುದಕ್ಕೆ ತಮಗೆ ವಂದಿಸಿ ಒಂದೇ ಒಂದು ಸಲಹೆಯನ್ನು ನಾನು ತಮ್ಮ ಮೂಲಕ ಸರ್ಕಾರದ ಮುಂದಿಡುವುದಕ್ಕೆ ಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಕಿತ್ತೂರು ರಾಣಿ ಚೆನ್ನಮ್ಮನ ಪ್ರತಿಮೆಯನ್ನು ಬೆಂಗಳೂರು ನಗರದಲ್ಲಿ ಸ್ಥಾಪನೆ ಮಾಡಬೇಕೆಂಬ ವಿಚಾರವನ್ನು ಹೇಳಿದ್ದಾರೆ. ನಾನು ಅದನ್ನು ಸ್ವಾಗತಿಸುತ್ತೇನೆ. ಅದೇ ರೀತಿ ಶಿವಾಜಿ ಜೊತೆಗೆ ಬೆಳವಡಿಯ ಮಲ್ಲಮ್ಮನ ಇತಿಹಾಸ ಹೊಂದಾಣಿಕೆಯಾಗಿರತಕ್ಕದ್ದು. ಬೆಳವಡಿಯ ಮಲ್ಲಮ್ಮನ ಪ್ರತಿಮೆಯನ್ನು

ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನಲ್ಲಿ ಪ್ರತಿಷ್ಠಾಪನೆ ಮಾಡಬೇಕೆಂದು ಒತ್ತಾಯಿಸುತ್ತೇನೆ ಮತ್ತು ಬಸವೇಶ್ವರರ ಪ್ರತಿಮೆಯನ್ನು ಹಾಕಬೇಕೆಂಬ ಒತ್ತಾಯವನ್ನು ಸಹ ಮಾಡುತ್ತೇನೆ. ಈ ಮೂರು ಪ್ರತಿಮೆಗಳನ್ನು ಶಿವಾಜಿಯ ಪ್ರತಿಮೆ ಇರತಕ್ಕ ದೊಡ್ಡ ಕೆರೆ ಅಂಗಳ ಏನಿದೆ 40ಎಕರೆ ಜಮೀನು ಇರತಕ್ಕ ಪ್ರದೇಶ, ಸುಂದರವಾಗಿರತಕ್ಕ ಪ್ರದೇಶ, ಆ ಪ್ರದೇಶದಲ್ಲಿ ಹಾಕಬೇಕು. ಬೆಂಗಳೂರು ನಗರ ಹೊರ ರಾಜ್ಯಗಳಿಂದ ಬರತಕ್ಕ ಜನರಿಗೆ ಒಂದು ಆದರ್ಶವಾಗಿರತಕ್ಕ ನಗರ. ಇದು ನಮ್ಮ ರಾಜ್ಯದ ರಾಜಧಾನಿ. ರಾಷ್ಟ್ರೀಯ ಐಕ್ಯತೆ ಸಂಪೂರ್ಣವಾಗಿರತಕ್ಕ ರಾಜ್ಯ ಎಂಬ ದೃಷ್ಟಿಯಿಂದ ಇದು ಆಗಲಿ ಎಂದು ಈ ಸಲಹೆಯನ್ನು ಸರ್ಕಾರದ ಮುಂದೆ ಇಡುತ್ತೇನೆ. ಟಿಪ್ಪುಸುಲ್ತಾನರ ಪ್ರತಿಮೆಯನ್ನು ಪ್ರತಿಷ್ಠಾಪನೆ ಮಾಡೋಣ. ಅವರೂ ನಮ್ಮವರೇ, ಅವರು ಬೇರೆ ಎಂಬ ಪ್ರಶ್ನೆ ಬರುವುದಿಲ್ಲ. ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಹೆಚ್. ಕೌಜಲಗಿ : ಮಾನ್ಯ ಸಿಂಧ್ಯರವರು ಹೇಳಿದ ಪ್ರಕಾರ ಬೆಳವಡಿ ಮಲ್ಲಮ್ಮನ ಪ್ರತಿಮೆಯನ್ನು ಬೆಂಗಳೂರಿನಲ್ಲಿ ಪ್ರತಿಷ್ಠಾಪನೆ ಮಾಡಬೇಕೆಂಬ ವಿಚಾರ ಸ್ವಾಗತಾರ್ಹವಾದುದು. ಅದನ್ನು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಕ್ರಿಯೆಯಿಂದ ಪ್ರತಿಕ್ರಿಯೆ ಪ್ರಾರಂಭವಾಗುತ್ತದೆ. ಮಹಾರಾಷ್ಟ್ರದಲ್ಲಿ ನಮ್ಮ ಕನ್ನಡಿಗರ ಪ್ರತಿಮೆಗಳು ಇದ್ದಾಗ ಅದರ ಪರಿಣಾಮ ಕೆಟ್ಟದ್ದಾಗಬಹುದೆಂದು ಹೇಳುತ್ತಾ, ಮಾನ್ಯ ವಾಟಾಲ್ ನಾಗರಾಜ್ ಅವರಲ್ಲಿ ವಿನಂತಿಸುತ್ತೇನೆ, ಅವರನ್ನು ನಾನು ಈ ಸಂದರ್ಭದಲ್ಲಿ ಬಾವಿಯಿಂದ ಹೊರಗೆ ಬರಬೇಕೆಂದು ವಿನಂತಿಸುತ್ತೇನೆ.

ಶ್ರೀ ಎಸ್.ಹೆಚ್. ಕೌಜಲಗಿ : ಬನ್ನಿ ವಾಟಾಳ್ ನಾಗರಾಜ್ ಅವರೆ, ಬೆಳವಡಿ ಮಲ್ಲಮ್ಮನ ಪ್ರತಿಮೆಯನ್ನು ಸ್ಥಾಪಿಸುತ್ತಾರೆ ಬನ್ನಿ. ಸಂಗೊಳ್ಳಿ ರಾಯಣ್ಣನ ಹಿಂದೆ ಬೆಳವಡಿ ಮಲ್ಲಮ್ಮನ ಪ್ರತಿಮೆಯನ್ನು ಸ್ಥಾಪಿಸುವುದಕ್ಕೆ ಒಪ್ಪಿದ್ದಾರೆ. ಎರಡೂ ಮಾಡೋಣ ಬನ್ನಿ. ಶಿವಾಜಿ ಮಗ್ಗಲಿಲ್ಲಿ ಬೆಳವಡಿ ಮಲ್ಲಮ್ಮನನ್ನು ಕೂರಿಸೋಣ.

ಶ್ರೀ ಕೆ.ಹೆಚ್. ರಂಗನಾಥ್ : ತಮ್ಮ ವೈಯಕ್ತಿಕ ಅಭಿಪ್ರಾಯವನ್ನು ಮಾನ್ಯ ವಾಟಾಳ್ ನಾಗರಾಜ್ ಅವರು ಸಮರ್ಥನೆ ಮಾಡಿದ್ದಾರೆ. ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಮತ್ತೆ ಅದು ಏನು ಎನ್ನುವುದನ್ನು ಈ ಸದನದ ಮೂಲಕ ರಾಜ್ಯದ ಜನರ ಮುಂದೆ ಇಟ್ಟಿದ್ದಾರೆ. ಆದರೆ ಧರಣಿ ಮಾಡತಕ್ಕದ್ದು, ಆ ಮಟ್ಟಕ್ಕೆ ಹೋಗತಕ್ಕದ್ದು ಈಗ ಅವಶ್ಯಕತೆ ಇಲ್ಲವೆಂದು ಭಾವಿಸಿ ನಾನು ತಮ್ಮ ಮೂಲಕ ಅವರಲ್ಲಿ ಕೇಳಿಕೊಳ್ಳುತ್ತೇನೆ. ಅವರು ತಮ್ಮ ಸ್ಥಾನಕ್ಕೆ ಬಂದು ಕಾರ್ಯಕಲಾಪದಲ್ಲಿ ಭಾಗವಹಿಸಬೇಕು.

ಉಪಾಧ್ಯಕ್ಷರು : ವಾಟಾಳ್ ನಾಗರಾಜ್ ಅವರೆ, ದಯವಿಟ್ಟು ತಮ್ಮ ಸ್ಥಾನಕ್ಕೆ ಬನ್ನಿ.

ಶ್ರೀ ಎಸ್. ಹೆಚ್. ಕೌಜಲಗಿ : ಮಾನ್ಯ ರಂಗನಾಥ್ ಅವರು ಹೇಳಿದ ಪ್ರಕಾರ ತಾವು ಬಾವಿಯಿಂದ ಹೊರಗೆ ಬರಬೇಕು. ಏಕೆಂದರೆ ಈಗಾಗಲೇ ಶಿವಾಜಿ ಪುತ್ಥಳಿಯ ಜೊತೆ ಬೆಳವಡಿ ಮಲ್ಲಮ್ಮನ ಪ್ರತಿಮೆಯನ್ನು ಹಚ್ಚುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ತಾವು ತಮ್ಮ ಸ್ಥಾನಕ್ಕೆ ಬರಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಮಾನ್ಯ ನಾಗರಾಜ್ ಅವರು ಮಿತ್ರ ಸದಸ್ಯರ ಮನವಿ ಮೇರೆಗೆ ಒತ್ತಾಯದ ಮೇರೆಗೆ ಬಾವಿಯಿಂದ ಹೊರಗೆ ಬಂದು ತಮ್ಮ ಆಸನದಲ್ಲಿ ಆಸೀನರಾಗಬೇಕಾಗಿ ಕೋರುತ್ತೇನೆ.

ಶ್ರೀ ಜೆ.ಸಿ. ಮಧುಸ್ವಾಮಿ: ನಾವು ಆಗಾಗ ಬಾವಿಗೆ ಬೀಳುತ್ತಿರುತ್ತೇವೆ. ಈಗ ಅವರು ನಮ್ಮ ಜೊತೆಗೆ ಬರಬೇಕೆಂದು ಕೇಳಿಕೊಳ್ಳುತ್ತೇವೆ.

ಉಪಾಧ್ಯಕ್ಷರು: ದಯವಿಟ್ಟು ತಮ್ಮ ಸ್ಥಾನಕ್ಕೆ ಬರಬೇಕು.

ಶ್ರೀ ಎಂ. ಮಹದೇವ್: ವಾಟಾಳ್ ನಾಗರಾಜ್ ಅವರು ಬಾವಿಗೆ ಬಿದ್ದಿದ್ದಾರೆ, ಆದರೆ ಹಗ್ಗ ಇಲ್ಲವಲ್ಲ ಎತ್ತುವುದಕ್ಕೆ?

ಉಪಾಧ್ಯಕ್ಷರು: ಇದು ಹಗ್ಗ ಬೇಕಾಗಿರತಕ್ಕ ಬಾವಿ ಅಲ್ಲ.

(ಶ್ರೀ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಿಂದಲೇ ಮಾತನಾಡಿದರು.)

ಶ್ರೀ ಎಂ. ಮಹದೇವ್: ವಾಟಾಳ್ ನಾಗರಾಜ್ ಅವರನ್ನು ಎತ್ತುವುದಕ್ಕೆ ಪ್ರಯತ್ನ ಮಾಡುತ್ತೇನೆ. ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆದರೆ ಇದ್ದಕಿದ್ದಂತೆ ಏಕೆ ಅವರಿಗೆ ಉದ್ರೇಕ ಬರುತ್ತದೆಂದು ಗೊತ್ತಿಲ್ಲ. ಹಗ್ಗ ಅಂದರೆ ಸೌಹಾರ್ದದ ಹಗ್ಗ. ಹಗ್ಗ ಅಂದರೆ ಎಳೆಯುವ ಹಗ್ಗ ಅಲ್ಲ. ನಾವು ಸ್ವೀಕರ್ ಎಲ್ಲ ಸೇರಿಕೊಂಡು ಸಹಾಯ ಮಾಡುತ್ತಿದ್ದೇವೆ. ಅದು ಆ ಹಗ್ಗ

ಶ್ರೀ ಕೆ. ಹೆಚ್. ರಂಗನಾಥ: ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇದೆ. ನೀತಿ ಇದೆ.ಆ ಪ್ರಕಾರ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಸದನದ ಮೂಲಕ ಅವರು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ನಮ್ಮ ಭಿನ್ನಭಿಪ್ರಾಯ ಇಲ್ಲ ಅದರೆ ಈಗ ಅವರು ಯಾರು ಏನು ಹೇಳಿದರೂ ಕೇಳುತ್ತಿಲ್ಲ. ಆದ್ದರಿಂದ ನಾನು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಅವರ ಮನಸ್ಸಿಗೆ ನೋವು ಮಾಡತಕ್ಕ ಪ್ರಶ್ನೆ ಯಾರದ್ದೂ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ: ತಮ್ಮ ಸ್ಟೇಟ್‌ಮೆಂಟ್ ಅಫಿಷಿಯಲ್ ಆಗುತ್ತದೆ. ಅದಕ್ಕೆ ಮುಂಚೆ ನಾನು ತಮಗೆ ಸಹಾಯ ಮಾಡುತ್ತೇನೆ. ಮುಖ್ಯ ಮಂತ್ರಿಗಳ ಜೊತೆಯಲ್ಲಿ ನಾನು ಈ ವಿಚಾರವನ್ನು ಮಾತನಾಡಿದ್ದೇನೆ. ಮುಖ್ಯ ಮಂತ್ರಿಗಳು ಮಹಾರಾಷ್ಟ್ರದ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಮಾತಾಡುತ್ತೇನೆಂದು ಹೇಳಿದ್ದಾರೆ. ಮುಂಬೈಯಲ್ಲಿ ಬಸವೇಶ್ವರರ, ಕಿತ್ತೂರು ರಾಣಿ ಚೆನ್ನಮ್ಮನ ಪ್ರತಿಮೆಯನ್ನು ಸ್ಥಾಪನೆ ಮಾಡುವುದಕ್ಕೆ ನಾನು ಮಾತನಾಡಿ ಒತ್ತಾಯ ಮಾಡುತ್ತೇನೆಂದು ಹೇಳಿದ್ದಾರೆ ನಮ್ಮ ಸರ್ಕಾರ ಹಣ ಕಾಸಿನ ದೃಷ್ಟಿಯಿಂದ ಅವರಿಗೆ ಸಹಾಯ ಮಾಡುತ್ತೆದೆಂಬ ಭರವಸೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಅದರ ಬಗ್ಗೆ ಹೇಳಿಕೆಯನ್ನು ಮಾಡಿಸಲಿಕ್ಕೆ ಮಾನ್ಯ ರಂಗನಾಥ್ ರವರು ಮುಖ್ಯಮಂತ್ರಿಗಳ ಜೊತೆ ಮಾತನಾಡಬೇಕೆಂದು ನಾನು ಸಹ ಒತ್ತಾಯ ಮಾಡುತ್ತೇನೆ. ಈ ಹಿನ್ನೆಲೆಯಲ್ಲಿ ಮಾನ್ಯ ವಾಟಾಳ್ ನಾಗರಾಜ್ ರವರು ತಮ್ಮ ಪೀಠಕ್ಕೆ ಬರಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್: ನಾನು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ದಯಮಾಡಿ ಮಾನ್ಯ ವಾಟಾಳ್ ನಾಗರಾಜ್ ರವರು ತಮ್ಮ ಪೀಠಕ್ಕೆ ಬಂದು ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ನಿಯಮ 334ರ ಮೇರೆ ಚರ್ಚೆ

(1) ಹತ್ತು ಹೆಚ್.ಪಿ. ರೈತರಿಗೆ ನೀಡುತ್ತಿರುವ ರಿಯಾಯಿತಿಯ ಮುಂದುವರಿಕೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಉಪಾಧ್ಯಕ್ಷರೆ, ಕೆಇಬಿಯವರು ಈಗ ಹತ್ತು ಹೆಚ್.ಪಿ.ವರೆಗೆ ರೈತರ ಪಂಪುಸೆಟ್ಟುಗಳಿಗೆ ಯಾವುದೇ ಹಣವನ್ನು ತೆಗೆದುಕೊಳ್ಳುವುದಿಲ್ಲ. ಇದರಿಂದ ರೈತರಿಗೆ ಬಹಳ ಉಪಯುಕ್ತವಾಗಿರುತ್ತದೆ.